**ಎಲ್ ಎ ಸಿ ನಂ.8/2013**

**ಆರ್ ಡಬ್ಲ್ಯೂ 1**

**ದಿನಾಂಕ: 13-12-2017 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಬಿ ಪಿ ಆರ್ ರವರಿಂದಃ**

ಹಳೆ ಕಾಯ್ದೆಯಡಿ ಒಂದು ಮಾವಿನ ಮರಕ್ಕೆ *11,625-00* ನಿಗಧಿ ಮಾಡಿದ್ದೇವು. ಹೊಸ ಕಾಯ್ದೆ ಯಡಿ ಒಂದು ಮಾವಿನ ಮಾರಕ್ಕೆ *20,669-34* ಬೆಲೆ ನಿಗಧಿಪಡಿಸಿರುತ್ತೇವೆ. ನೂತನ ಭೂಸ್ವಾಧೀನ ಕಾಯ್ದೆ ಯಡಿ ಸದರಿ ಬೆಲೆಗೆ ನಾಲ್ಕು ಪಟ್ಟು ಹೆಚ್ಚು ಬೆಲೆ ಕೊಡಬೇಕಾಗಿರುತ್ತದೆ ಅಂದರೆ ಸರಿಯಲ್ಲ. ಜಂಟಿ ಅಳತೆ ತಃಖ್ತೆ ಯಲ್ಲಿ ತೋಟಗಾರಿಕೆ ಇಲಾಖೆಯವರು ಮಾವಿನ ಮರದ ಜಾತಿಯನ್ನು ನಮೂದು ಮಾಡಿಲ್ಲ ಎಂದರೆ ಸರಿ. ಜಂಟಿ ಅಳತೆ ತಃಖ್ತೆಯಲ್ಲಿ ಬಾದಾಮಿ ಜಾತಿಯ ಮಾವಿನ ಮರಗಳು ಇರುವ ಬಗ್ಗೆ ನಮೂದಿಸಿಲ್ಲ ಎಂದರೆ ಸರಿ. ತೋಟಗಾರಿಕೆ ಇಲಾಖೆಯವರು ಮಾವಿನ ಮರಗಳ ಬಗ್ಗೆ ಜಂಟಿ ತಃಖ್ತೆಯಲ್ಲಿ ಬರೆದಿದ್ದು ಯಾವ ಜಾತಿಯ ಮರಗಳು ಎಂದು ಬರೆದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಸದರಿ ಮಾವಿನ ಮರಗಳನ್ನು ತೋಟಗಾರಿಕೆ ಇಲಾಖೆಯವರು ನೋಡಿ ಅವುಗಳ ಬೆಲೆಯನ್ನು ನಮೂದು ಮಾಡಿರುತ್ತಾರೆ ಎಂದು ಹೇಳುತ್ತಾರೆ. ತೋಟಗಾರಿಕೆ ಇಲಾಖೆಯವರು ಸದರಿ ಮರಗಳ ಬೆಲೆಯನ್ನು ನಿಗಧಿಪಡಿಸಿ ನಮಗೆ ಮಾಹಿತಿಯನ್ನು ನೀಡಿರುತ್ತಾರೆ. ಮೌಲ್ಯ ನಿರ್ಧರಣ ಪಟ್ಟಿಯನ್ನು ತೋಟಗಾರಿಕೆ ಇಲಾಖೆಯವರು ಮಾಡಿದ್ದು ಅದರಲ್ಲಿಯೂ ಸಹ ಮಾವಿನ ಮರಗಳ ಜಾತಿಯನ್ನು ನಮೂದು ಮಾಡಿಲ್ಲ ಎಂದರೆ ಸರಿ. ತೋಟಗಾರಿಕೆ ಇಲಾಖೆಯವರು ನೀಡಿದ ಮಾವಿನ ಮರದ ಮೌಲ್ಯದ ಆಧಾರದ ಮೇಲೆ ನಾವು ಬೆಲೆ ನಿಗಧಿ ಮಾಡಿರುತ್ತೇವೆ.

ಮಾವಿನ ಮರಗಳು ಉಪ್ಪಿನಕಾಯಿ ಹಾಕುವ ಮಾವಿನ ಮರಗಳು ಕಾಡು ಜಾತಿಯ ಮಾವಿನ ಮರಗಳು ಎಂದರೆ ನನಗೆ ನಿರ್ಧಿಷ್ಠವಾಗಿ ಹೇಳಲು ಬರುವುದಿಲ್ಲ. ಜಂಟಿ ಅಳತೆ ತಃಖ್ತೆಯಲ್ಲಿ ಮಾವಿನ ಮರಗಳು ಉಪ್ಪಿನಕಾಯಿಗೆ ಹಾಕುವ ಮಾವಿನ ಮರಗಳು ಅಥವಾ ಕಾಡು ಜಾತಿಯ ಮಾವಿನ ಮರಗಳು ಎಂದು ಹೇಳಿರುವುದಿಲ್ಲ. ಬೆಟ್ಟತಾವರೆಕೆರೆ ಗ್ರಾಮದಲ್ಲಿ ರೈತರು ರಸಪೂರಿ ಮಾವಿನ ಹಣ್ಣು ಮತ್ತು ಬಾದಾಮಿ ಜಾತಿಯ ಮಾವಿನ ಗಿಡಗಳನ್ನು ಬೆಳೆದಿರುವ ಬಗ್ಗೆ ನನಗೆ ಗೊತ್ತಿಲ್ಲ. ತೋಟಗಾರಿಕೆ ಇಲಾಖೆಯವರು ಪ್ರತಿ ಮೂರು ವರ್ಷಕೊಮ್ಮೆ ಮರಗಳ ಬೆಲೆಯನ್ನು ಪರಿಷ್ಕರಣೆ ಮಾಡುತ್ತಾರೆ. ಸರ್ಕಾರದವರು ಆಯಾಯ ಸಂದರ್ಭಗಳಲ್ಲಿ ಬೆಲೆಗಳನ್ನು ನಿಗಧಿಪಡಿಸಿದ್ದು, ಸದರಿ ಬೆಲೆಗಳಂತೆ ಗಿಡಗಳ ಮೌಲ್ಯಗಳನ್ನು ನಿಗಧಿಪಡಿಸಿರುತ್ತೇವೆ . ಸದರಿ ಬೆಲೆಗಳನ್ನು ನಿಗಧಿಪಡಿಸಿರುವ ಬಗ್ಗೆ ಸೂಚನಾ ಪಟ್ಟಿಯನ್ನು ನಾನು ಹಾಜರುಪಡಿಸಿರುವುದಿಲ್ಲ. ತೋಟಗಾರಿಕೆ ಇಲಾಖೆಯವರು *04-10-2016* ರಂದು ವರದಿ ನೀಡಿದ್ದು ಅದರಲ್ಲಿ ಒಂದು ಬಾದಾಮಿ ಮರ ಸುಮಾರು *70* ರಿಂದ *80* ವರ್ಷ ಆರ್ಥಿಕವಾಗಿ ಫಸಲು ಪಡೆಯಬಹುದು ಎಂದು ಅದರಲ್ಲಿ ಬರೆದಿದೆ ಎಂದರೆ ಸರಿ. ಭದ್ರಾ ಮೇಲ್ದಂಡ ಯೋಜನೆಯಡಿ ಬೆಟ್ಟತಾವರೆಕೆರೆ ಗ್ರಾಮದಲ್ಲಿ ಮಾವಿನ ಮರಗಳನ್ನು ಭೂ ಸ್ವಾಧೀನಪಡಿಸಿಕೊಂಡಾಗ ಅವುಗಳ ವಯಸ್ಸು *10* ರಿಂದ *15* ಆಗಿತ್ತು.

ನಾವು ಸದರಿ ಮರಗಳನ್ನು ಸ್ವಾಧೀನಪಡಿಸಿಕೊಂಡಿದ್ದರಿಂದ ಅರ್ಜಿದಾರರು ಸುಮಾರು *65* ವರ್ಷಗಳ ವರಮಾನವನ್ನು ಕಳೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಒಂದು ಮಾವಿನ ಮರ ಪ್ರತಿ ವರ್ಷಕ್ಕೆ *50* ರಿಂದ *300* ಕೆಜಿ ಫಸಲನ್ನು ಕೊಡುತ್ತದೆ ಎಂದರೆ ಸರಿ. ದಿನಾಂಕಃ *28-06-2016* ರಲ್ಲಿ ಹಾಫ್ ಕಾಮ್ಸ ದವರು ನೀಡಿದ ಮಾವಿನ ಫಸಲಿನ

ಬೆಲೆಯ ಬಗ್ಗೆ ಹೇಳಿರುತ್ತಾರೆ ಎಂದರೆ ಸರಿ. ನಾವು ಭೂಸ್ವಾಧೀನಪಡಿಸಿಕೊಂಡಾಗ ಒಂದು ಮಾವಿನ ಮರ ಅರ್ಜಿದಾರರಿಗೆ ಪ್ರತಿ ವರ್ಷ *250* ಕೆಜಿ ಫಸಲು ಕೊಡುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ಭೂಸ್ವಾಧೀನಪಡಿಸಿಕೊಂಡು ಪರಿಹಾರ ಕೊಡುವಾಗ ಫಸಲಿನ ಆಧಾರದ ಮೇಲೆ ಬೆಲೆಯನ್ನು ನಿಗಧಿಪಡಿಸುವ ಬಗ್ಗೆ ನನಗೆ ಗೊತ್ತಿರುತ್ತದೆ. ಈ ಅರ್ಜಿಯಲ್ಲಿ ಪರಿಹಾರ ನೀಡುವಾಗ ಫಸಲಿನ ಆಧಾರದ ಮೇಲೆ (Yield Basis) ಪರಿಹಾರ ನೀಡುವ ಬಗ್ಗೆ ದಾಖಲೆಯನ್ನು ನಾನು ಹಾಜರುಪಡಿಸಿಲ್ಲ.

ಒಂದು ಮಾವಿನ ಮರದಿಂದ ವಾರ್ಷಿಕವಾಗಿ 250 ಕೆಜಿ ಫಸಲನ್ನು ಪಡೆಯುತ್ತಿದ್ದು, ಒಂದು ಕೆಜಿಗೆ 70 ರಿಂದ 80 ಬೆಲೆ ಇದ್ದು ಅರ್ಜಿದಾರನು ವಾರ್ಷಿಕವಾಗಿ 17,500-00 ಆದಾಯ ಪಡೆಯುತ್ತಿದ್ದ ಎಂದರೆ ಸರಿಯಲ್ಲ. ಅರ್ಜಿದಾರನು ಎಷ್ಟು ಆದಾಯ ಪಡೆಯುತ್ತಿದ್ದ ಎಂದು ನನಗೆ ವೈಯಕ್ತಿಕವಾಗಿ ಗೊತ್ತಿಲ್ಲ. ಅರ್ಜಿದಾರನ ಜಮೀನಿನಲ್ಲಿ ಒಟ್ಟು 180 ಮಾವಿನ ಮರಗಳು ಇದ್ದು, ಅವನು ವಾರ್ಷಿಕವಾಗಿ 31,50,000-00 ಆದಾಯ ಪಡೆಯುತ್ತಿದ್ದ ಎಂದರೆ ಸರಿಯಲ್ಲ. ಅರ್ಜಿದಾರನಿಗೆ ಸರಿಯಾದ ಪರಿಹಾರ ಕೊಡದೆ ಇದ್ದುದರಿಂದ ಅರ್ಜಿದಾರನು ಮಾವಿನ ಮರಗಳಿಂದ ಬರುವ ಆದಾಯವನ್ನು ಕಳೆದುಕೊಂಡಿದ್ದಾನೆ ಎಂದರೆ ಸರಿಯಲ್ಲ. ಅರ್ಜಿದಾರನು ಸದರಿ ಆದಾಯವನ್ನು ಪ್ರತಿ ವರ್ಷ ಪಡೆಯುತ್ತಿದ್ದು 60 ರಿಂದ 70 ವರ್ಷದ ಆದಾಯವನ್ನು ಕಳೆದುಕೊಂಡಿದ್ದಾನೆ ಎಂದರೆ ಸರಿಯಲ್ಲ.

ನಾನು ಪರಿಹಾರ ನೀಡುವಾಗ ಸರಿಯಾದ ಮಾಹಿತಿಯನ್ನು ಗಣನೆಗೆ ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ. ತರೀಕೆರೆಯ ತಾಲ್ಲೂಕಿನ ಭದ್ರಾ ಮೇಲ್ದಂಡೆಯ ಚಾನಲ್ ಎಲ್ಲೆಲ್ಲಿ ಹೋಗಿರುತ್ತದೆ ಅಲ್ಲಿ ನಾನು ನೋಡಿರುತ್ತೇನೆ ಎಂದರೆ ಸರಿ. ನಾನು ತರೀಕೆರೆ ತಾಲ್ಲೂಕಿನಲ್ಲಿ ಉಪವಿಭಾಗಧಿಕಾರಿಯಾಗಿ ಅಧಿಕಾರ ವಹಿಸಿಕೊಂಡ ನಂತರ ಹಳಿಯೂರು ಗ್ರಾಮದಲ್ಲಿ ಭೂಸ್ವಾಧೀನ ಪ್ರಕ್ರಿಯೆಯನ್ನು ಪ್ರಾರಂಭ ಮಾಡಿದ್ದು ಅಲ್ಲಿ ಸ್ಥಳ ಪರಿಶೀಲನೆ ಮಾಡಿರುತ್ತೇನೆ. ಹುಣಸಘಟ್ಟ ಗ್ರಾಮ ಮತ್ತು ನರಸೀಪುರ ಗ್ರಾಮಗಳಲ್ಲಿ ಭದ್ರಾ ಮೇಲ್ದಂಡೆಯ ಚಾನಲ್ ಹೋಗುತ್ತಿದ್ದು ಅಲ್ಲಿ ನಾನು ಸ್ದಳ ಪರಿಶೀಲನೆ ಮಾಡಿರುತ್ತೇನೆ. ಸಾಕ್ಷಿಯು ಮುಂದುವರಿದು ನಾನು ಬೇರೆ ಪ್ರಕರಣಗಳಲ್ಲಿ ಪರಿಶೀಲನೆ ಮಾಡಿರುತ್ತೇನೆ ಎಂದು ಹೇಳುತ್ತಾರೆ. ಬೆಟ್ಟತಾವರೆಕೆರೆ ಗ್ರಾಮದಲ್ಲಿ ಜಾಕ್ವಲ್ ಮಾಡುತ್ತಿರುವ ಬಗ್ಗೆ ನಾನು ನೋಡಿರುವುದಿಲ್ಲ. ಸದರಿ ಗ್ರಾಮದಲ್ಲಿ ಜಾಕ್ವಲ್ ಇರುವ ಬಗ್ಗೆ ನನಗೆ ಗೊತ್ತಿದೆ.

ಭದ್ರಾ ಮೇಲ್ದಂಡೆ ಯೋಜನೆಯಡಿಯಲ್ಲಿ ಬೆಟ್ಟತಾವರೆಕೆರೆ ಗ್ರಾಮದಲ್ಲಿ ಎಷ್ಟು ಜಮೀನನ್ನು ಸ್ವಾಧೀನಪಡಿಸಿಕೊಂಡಿದ್ದೇವೆ ಎಂದು ನನಗೆ ನೆನಪಿಲ್ಲ. ಬೆಟ್ಟತಾವರೆಕೆರೆ ಗ್ರಾಮ ಮತ್ತು ಹುಣಸಘಟ್ಟ ಗ್ರಾಮಗಳ ನಡುವೆ ಇರುವ ಚಾನಲ್‌ಗಳ ನಡುವೆ ಸುಮಾರು ಅರ್ಧ ಕಿ.ಮಿ ಯಿಂದ 2 ಕಿ.ಮಿ ವರೆಗೆ ಅಂತರ ಇರುತ್ತದೆ ಎಂದರೆ ಸರಿ. ಬೆಟ್ಟತಾವರೆಕೆರೆ, ಹುಣಸಘಟ್ಟ ಮತ್ತು ನರಸೀಪುರ, ಕೆ.ಹುಸೂರು, ಸಮತಳ, ಹಳಿಯೂರು ಗ್ರಾಮಗಳ ಜಮೀನುಗಳ ಬಗ್ಗೆ ಏಕಕಾಲಕ್ಕೆ ಪ್ರಾಥಮಿಕ ಅಧಿಸೂಚನೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. *2010-11* ರಲ್ಲಿ ಹಳೆಯ ಭೂಸ್ವಾಧೀನ ಕಾಯ್ದೆ ಯಡಿ ಪ್ರಾಥಮಿಕ ಅಧಿಸೂಚನೆ ಹೊರಡಿಸಿರುತ್ತೇವೆ ಎಂದರೆ ಸರಿ. ಬೆಟ್ಟತಾವರೆಕೆರೆ ಗ್ರಾಮದಲ್ಲಿ *147.15* ಎಕರೆ ಜಮೀನನ್ನು ಭೂ ಸ್ವಾಧೀನ ಪಡಿಸಿಕೊಂಡಿರುತ್ತೇವೆ. ತರೀಕೆರೆ ತಾಲ್ಲೂಕಿನ ಬೇರೆ ಗ್ರಾಮಗಳಲ್ಲಿ ಬೆಟ್ಟತಾವರೆಕೆರೆ ಗ್ರಾಮವನ್ನು ಹೊರತುಪಡಿಸಿ *100* ಎಕರೆಗಿಂತ ಹೆಚ್ಚು ಜಮೀನನ್ನು ವಶಪಡಿಸಿಕೊಂಡಿರುವುದಿಲ್ಲ. ಜಾಕ್ವಲ್ ಸಲುವಾಗಿ ಹೆಚ್ಚು ಅಗಲದ ಮತ್ತು ಆಳದ ಚಾನಲ್ ಮಾಡಬೇಕಾಗಿದ್ದರಿಂದ ಬೆಟ್ಟತಾವರೆಕೆರೆಯಲ್ಲಿ ಹೆಚ್ಚು ಜಮೀನನ್ನು ವಶಪಡಿಸಿಕೊಂಡಿರುವ ಬಗ್ಗೆ ನನಗೆ ಮಾಹಿತಿ ಇಲ್ಲ.

ಅಮೃತಾಪುರ ಹೋಬಳಿಯಲ್ಲಿ ಉಬ್ರಾಣಿ ಅಮೃತಾಪುರ ಎತ ನೀರಾವರಿ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಸದರಿ ಎತ ನೀರಾವರಿಯಿಂದ *7* ಕೆರೆಗಳಿಗೆ ನೀರಾವರಿ ಯೋಜನೆ ಮಾಡಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ಉಬ್ರಾಣಿ ಎತ

ನೀರಾವರಿಯಿಂದ ಕೆರೆಗಳಿಗೆ ನೀರು ಬಂದಿದ್ದರಿಂದ ಬೆಟ್ಟತಾವರೆಕೆರೆ ಗ್ರಾಮದಲ್ಲಿ *2013* ರಲ್ಲಿ ಒಂದು ಗುಂಟೆಗೆ *50,000-00* ಬೆಲೆ ಇತ್ತು ಎಂದರೆ ಸರಿಯಲ್ಲ. ನಾವು ಪ್ರಾಥಮಿಕ ಅಧಿಸೂಚನೆ ಹೊರಡಿಸುವಾಗ ಒಂದು ಗುಂಟೆಗೆ *40,000-00* ಬೆಲೆ ಇತ್ತು ಎಂದರೆ ಸರಿಯಲ್ಲ.

ಅರ್ಜಿದಾರನ ಜಮೀನಿಗೆ ನಾವು *1,85,163-00* ಬೆಲೆಯನ್ನು ಅವೈಜ್ಞನಿಕವಾಗಿ ನಿಗಧಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾವು ಅರ್ಜಿದಾರನ ಜಮೀನನ್ನು ವಶಪಡಿಸಿಕೊಂಡಾಗ ಅರ್ಜಿದಾರನ ಜಮೀನಿನ ಒಟ್ಟು ಬೆಲೆ *90,50,000-00* ಆಗುತ್ತಿತ್ತು ಎಂದರೆ ಸರಿಯಲ್ಲ. ನಾವು ಪರಿಹಾರ ನೀಡುವಾಗ ನಷ್ಟ ಪರಿಹಾರವಾಗಿ ಶೇಕಡ *30* ನಿಗಧಿ ಮಾಡಿದ್ದು ಖಾಲಿ ಜಮೀನಿನ ಮೇಲೆ ಮಾಡಿರುತ್ತೇವೆ ಎಂದರೆ ಸರಿ. ಬಡ್ಡಿಯನ್ನು ನೀಡಿದ್ದು ಸದರಿ ಬಡ್ಡಿಯನ್ನು ಸಹ ಜಮೀನಿಗಾಗಿ ನೀಡಿದ ಪರಿಹಾರದ ಮೇಲೆ ಮಾತ್ರ

ನೀಡಿರುತ್ತೇವೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ನಾವು ನಮಗೆ ನೀಡಿದ ಸೂಚನೆಗಳ ಮೇಲೆ ನಾವು ಮಾಡಿರುತ್ತೇವೆ ಎಂದು ಹೇಳುತ್ತಾರೆ. ಜಮೀನಿನ ಮೇಲೆ ಪರಿಹಾರ ಮತ್ತು ತೋಟ, ಮಾವಿನ ಮರದ ಪರಿಹಾರದ ಮೇಲೆ ನಷ್ಟ ಪರಿಹಾರನ್ನು ನಿಗಧಿ ಮಾಡಿಲ್ಲ ಎಂದರೆ ಸರಿ.

ಜಮೀನಿನ ಪರಿಹಾರ ಮತ್ತು ತೋಟ ಮತ್ತು ನಷ್ಟ ಪರಿಹಾರದ ಮೇಲೆ ಒಟ್ಟಾಗಿ ಬಡ್ಡಿಯನ್ನು ನೀಡಿಲ್ಲ ಎಂದರೆ ಸರಿ. ಅರ್ಜಿದಾರನ ಜಮೀನಿಗೆ ನಾವು ಸರಿಯಾದ ಮಾರುಕಟ್ಟೆ ಬೆಲೆಯನ್ನು ನಿಗಧಿಪಡಿಸಿಲ್ಲ ಎಂದರೆ ಸರಿಯಲ್ಲ. ಜಮೀನಿನ ಮೇಲೆ ಮತ್ತು ತೋಟ, ಮರ ಕಟ್ಟಡ ಮತ್ತು ನಷ್ಟ ಪರಿಹಾರದ ಮೇಲೆ ಒಟ್ಟಾಗಿ ಶೇಕಡ *12* ಪರಿಹಾರ ಕೊಡಬೇಕು ಎಂದರೆ ಸರಿಯಲ್ಲ. ಹೆಚ್ಚಿನ ನಷ್ಟ ಪರಿಹಾರದ ಬೆಲೆ ಮತ್ತು ಹೆಚ್ಚುವರಿ ಮಾರುಕಟ್ಟೆ ಬೆಲೆಯನ್ನು ಜಮೀನಿಗಾಗಿ ನೀಡಿದ ಪರಿಹಾರದ ಮೇಲೆ ನಿಗಧಿಪಡಿಸಿರುವುದು ಸರಿಯಲ್ಲ ಎಂದರೆ ಸರಿಯಲ್ಲ. ಜಮೀನಿನ ಮೇಲೆ ಪರಿಹಾರ ಮತ್ತು ತೋಟ, ಮರ, ಕಟ್ಟಡದ ಮೇಲಿನ ಪರಿಹಾರದ ಮೇಲೆ ಒಟ್ಟಾಗಿ ಬಡ್ಡಿ ನಿಗಧಿಪಡಿಸಬೇಕಾಗಿತ್ತು ಎಂದರೆ ಸರಿಯಲ್ಲ. ಬೆಟ್ಟತಾವರೆಕೆರೆ, ಹುಣಸಘಟ್ಟ ಮತ್ತು ನರಸೀಪುರ ಗ್ರಾಮಗಳಲ್ಲಿರುವ ಜಮೀನಿನ ಮಾರುಕಟ್ಟೆ ಬೆಲೆ ಒಂದೇ ತರನಾಗಿರುತ್ತದೆ ಎಂದರೆ ಸರಿಯಲ್ಲ.

***(ಪಾಟೀ ಸವಾಲಿಗೆ ಸಮಯ ಕೋರಿದ್ದು ನೀಡಲಾಯ್ತು)***

***(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)***

**ಓ ಹೇ ಕೇ ಸ ಇ ಎ ಒ**

***(ಗಂಗಾಧರ ಚನ್ನಬಸಪ್ಪ ಹಡಪದ)***

**ಹಿರಿಯ ಸಿವಿಲ್ ನ್ಯಾಯಾಧೀಶರು, ತರೀಕೆರೆ.**

ಸಾಕ್ಷಿದಾರರ ಸಹಿ